೩. ಈ ತನಕ ಎಲ್ಲ ಮೀನುಗಾರಿಕಾ ಯಾಂತ್ರಿಕ ದೋಣಿಗಳಿಗೆ ವಿಮಾ ಸೌಲಭ್ಯವಿತ್ತು. ಈ ೧೦ ವರ್ಷಕ್ಕಿಂತ ಹಳೆಯದಾದ ದೋಣಿಗಳಿಗೆ ವಿಮಾ ಸೌಲಭ್ಯ ರದ್ದು ಮಾಡಿದ ಪ್ರಯುಕ್ತ ಮೀನುಗಾರರಿಗೆ ತೊಂದರೆ ಆಗುತ್ತಿದೆ. ವಿಮಾ ಕಂಪನಿಗಳಿಗೆ ಈ ವಿಚಾರ ಪುನರ್ ಪರಿಶೀಲಿಸಲು ಸರ್ಕಾರ ಒತ್ತಾಯ ತರಬೇಕು.

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು).—ಮಾನ್ಯ ಸಭಾಧ್ಯಕ್ಷರೇ, ಇತ್ತೀಚೆಗೆ ಕರ್ನಾಟಕವೂ ಸೇರಿದಂತೆ ದೇಶದಲ್ಲಿ ಡೀಸೆಲ್ ಬೆಲೆ ಏರಿರುವುದು ನಿಜ. ಕರ್ನಾಟಕ ರಾಜ್ಯದ ಕರಾವಳಿ ಪ್ರದೇಶವಲ್ಲದೆ ಇತರ ರಾಜ್ಯಗಳ ಕರಾವಳಿ ಪ್ರದೇಶಗಳಲ್ಲೂ ಕೂಡ ಮೀನಿನ ಬೆಲೆ ಏರುಪೇರಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಮೀನು ಒಂದು ಪೌಷ್ಟಿಕ ಆಹಾರವಲ್ಲದೆ ಶೀಘ್ರದಲ್ಲೇ ಕೊಳೆತು ಹೋಗುವಂತಹದ್ದು. ಇದರ ಬೆಲೆ ಏರಿಳಿತಕ್ಕೆ ಉತ್ಪತ್ತಿಯಾಗುತ್ತಿರುವ ಮೀನಿನ ಪ್ರಮಾಣ ಮತ್ತು ವಿವಿಧ ಜಾತಿಯ ಮೀನುಗಳ ಮೇಲೆ ಅವಲಂಬಿಸಿದೆ. ಕರಾವಳಿ ಮೀನುಗಾರಿಕೆಗೆ ಬೇಕಾದ ನೈಲಾನ್ ದಾರದ ಬೆಲೆ, ಹುರಿಹಗ್ಗ, ತೇರು ಬಾರುಡಿ ಇವುಗಳ ಬೆಲೆ ಏರುವುದು ಕೇಂದ್ರ ಸರ್ಕಾರದ ಆರ್ಥಿಕ ನೀತಿಯ ಮೇಲೆ ಅವಲಂಬಿಸಿದೆ. ಆದರೆ ಇವುಗಳ ಬೆಲೆ ಮೀನುಗಾರರು ಹೊರಬಾರದಷ್ಟಾಗಿಲ್ಲ. ಅಲ್ಲದೆ ಪ್ರತಿ ವರ್ಷ ಮೀನಿನ ಬೆಲೆ ಮತ್ತು ಬೇಡಿಕೆ ಕಡಿಮೆಯಾಗುತ್ತಿದೆಯೆಂಬುದು ಸರಿಯಲ್ಲ. ಕೆಲವು ದಿವಸಗಳಲ್ಲಿ ಮಾತ್ರ ಅಧಿಕ ಮೀನು ಉತ್ಪತ್ತಿಯಾದಲ್ಲಿ ಮಾತ್ರ ಬೆಲೆ ಕಡಿಮೆಯಾಗುವುದು ಸ್ವಾಭಾವಿಕ. ಇಂತಹ ಸಂದರ್ಭ ತಾತ್ಕಾಲಿಕ. ಆದರೆ ವರ್ಷವಿಡೀ ಆಗಿರುವುದಿಲ್ಲ.

೧ ಮೀನುಗಾರಿಕೆಯಲ್ಲಿ ನಿರತರಾಗಿರುವ ಮೀನುಗಾರಿಕೆ ಯಾಂತ್ರಿಕ ದೋಣಿಗಳಿಗೆ ಡೀಸೆಲ್ ಮೇಲಿನ ಮಾರಾಟ ಕರಕ್ಕೆ ಸಮಾನವಾದ ಸಬ್ಸಿಡಿಯನ್ನು ರಾಜ್ಯ ಸರ್ಕಾರವು ೧೯೮೪–೮೫ ರಿಂದ ಅನ್ವಯಿಸುವಂತೆ ಮಂಜೂರಾತಿ ನೀಡಿದೆ. ಅದರಂತೆ ರಾಜ್ಯದ ಎರಡೂ ಕರಾವಳಿಯಲ್ಲಿ ಮೀನುಗಾರಿಕೆ ಮಾಡುತ್ತಿರುವ ಪರ್ಸೀನ್ ದೋಣಿಗಳಿಗೆ ಗರಿಷ್ಠ ರೂ. ೯,೦೦೦–೦೦ ಟ್ರಾಲರ್ ಮತ್ತು ಯಾಂತ್ರಿಕ ದೋಣಿಗಳಿಗೆ ಗರಿಷ್ಠ ರೂ. ೩,೦೦೦–೦೦ ಮತ್ತು ಗಿಲ್ ನೆಟ್ ದೋಣಿಗಳಿಗೆ ಗರಿಷ್ಠ ರೂ. ೧,೦೦೦–೦೦ ಗಳ ಸಹಾಯ ಧನವನ್ನು ನೀಡಲಾಗುತ್ತಿದೆ.

ಜಗತ್ತಿನಲ್ಲೇ ಡೀಸಲ್ ಮತ್ತು ಪೆಟ್ರೋಲ್ ಅಭಾವವಿರುತ್ತದೆ. ಇದರಿಂದ ಕೇಂದ್ರ ಸರ್ಕಾರವು ಶೇಕಡಾ ೧೦ರಷ್ಟು ಡೀಸಲ್ ಸರಬರಾಜನ್ನು ಕಡಿತಗೊಳಿಸಿರುವರು. ಡೀಸಲ್ ಬೇಡಿಕೆಯು ಹೆಚ್ಚುತ್ತಿರುವುದರಿಂದ ಕೊರತೆಯುಂಟಾಗುತ್ತಿರುವುದು. ಈ ಬಗ್ಗೆ ಕೇಂದ್ರ ಸರ್ಕಾರವು ಸಂಬಂಧಪಟ್ಟ ಸಚಿವರೊಡನೆ ಸಮಾಲೋಚಿಸಿ ಮೀನುಗಾರಿಕೆಗೆ ಸಕಾಲದಲ್ಲಿ ಡೀಸಲ್ ಒದಗಿಸಲು ಪ್ರಯತ್ನಿಸಲಾಗುವುದು.

೨ ಕೇಂದ್ರ ಸರ್ಕಾರವು ಈ ವರ್ಷಕ್ಕೆ ಮಾತ್ರ (೧೯೯೦–೯೧) ಶೇ. ೧೦೦ ರಷ್ಟು ಅಬಕಾರಿ ತೆರಿಗೆ ರಿಯಾಯಿತಿಯನ್ನು ಯಾಂತ್ರಿಕ ಮೀನುಗಾರಿಕಾ ದೋಣಿಗಳು ಬಳಸುವ ಡೀಸಲ್ ಮೇಲೆ ಪೂರ್ಣವಾಗಿ ನೀಡಲು ಯೋಜಿಸಿದೆ. ಇದು ಹೊಸ ಯೋಜನೆಯಾಗಿರುವುದರಿಂದ ಈ ಸಾಲಿನ ಆಯವ್ಯಯದಲ್ಲಿ ಮೀನಿನ ಯೋಜನೆಗೆ ಅನುದಾನವನ್ನು ನಿಗದಿಪಡಿಸಿರುವುದಿಲ್ಲ. ಆದ್ದರಿಂದ ಕೇಂದ್ರ ಸರ್ಕಾರದ ಧನ ಸಹಾಯವನ್ನು ಪೂರ್ಣವಾಗಿ ಪಡೆಯುವ ಪ್ರಸ್ತಾವನೆಯು ರಾಜ್ಯ ಸರ್ಕಾರದ ಪರಿಶೀಲನೆಯಲ್ಲಿದೆ ಕೇಂದ್ರ ಸರ್ಕಾರದಿಂದ ಪೂರ್ಣಗಡ ಧನ ಸಹಾಯವು ಬಂದ ಕೂಡಲೇ ಈ ರಿಯಾಯಿತಿಯನ್ನು ಮೀನುಗಾರರಿಗೆ ಒದಗಿಸಲಾಗುವುದು.

೩ ಯಾಂತ್ರಿಕ ದೋಣಿಗಳ ವಿಮಾ ಸೌಲಭ್ಯ ಅವುಗಳ ಸ್ಥಿತಿಗಳ ಮೇಲೆ ಹೊಂದಿರುತ್ತದೆ. ೧೦ ವರ್ಷಗಳಿಂತ ಹಳೆಯದಾದ ದೋಣಿಗಳು ಸಾಕಷ್ಟು ಶಿಥಿಲವಾಗುವುದರಿಂದ ವಿಮಾ ಸೌಲಭ್ಯಕ್ಕೆ ಸಂಬಂಧಪಟ್ಟ ವಿಮಾ ಸಂಸ್ಥೆಗಳಿಂದ ಸೌಲಭ್ಯ ಸಿಗುವುದು ಕಷ್ಟ. ಆದರೂ ೧೦ ವರ್ಷಕ್ಕಿಂತ ಹಳೆಯದಾದ ಸುಸ್ಥಿತಿಯಲ್ಲಿರುವ ದೋಣಿಗಳಿಗೆ ವಿಮಾ ಸೌಲಭ್ಯ ಒದಗಿಸಿಕೊಡುವಂತೆ ವಿಮಾ ಕಂಪನಿಗಳಿಗೆ ಒತ್ತಾಯಿಸಲಾಗುವುದು.

ಅಧ್ಯಕ್ಷರ ಅಪ್ಪಣೆ ಕೋರಿ ಪ್ರಸ್ತಾಪಿಸಲಾದ ವಿಷಯ

ಮೈಸೂರಿನಲ್ಲಿ ವಿದೇಶಿ ವಿದ್ಯಾರ್ಥಿಗಳು ಅತ್ಯಾಚಾರ ಮಾಡಿರುವುದು

ಶ್ರೀ ಜಿ. ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೆ, ನಾನು ಒಂದು ಪ್ರಾಮುಖ್ಯವಾದಂಥ ವಿಷಯದ ಬಗ್ಗೆ ತಮ್ಮ ಗಮನವನ್ನು ಹಿಂಪೆ ಸೆಳೆದಿದ್ದೆ. ಮೈಸೂರಿನಲ್ಲಿ ವಿದೇಶಿ ವಿದ್ಯಾರ್ಥಿಗಳು ನಾಲ್ಕು ಜನರು ಸೇರಿ ಒಬ್ಬ ಹೆಣ್ಣುಮಗಳ ಮೇಲೆ ಅತ್ಯಾಚಾರ ಎಸಗಿದ್ದಾರೆ. ಈ ವಿಷಯದ ಬಗ್ಗೆ

ನಿಯಮ ೩೫೪ರ ಕೆಳಗೆ ನಾನು ಪ್ರಸ್ತಾಪ ಮಾಡಿದ್ದಾಗ ಸನ್ಮಾನ್ಯ ವೀರಪ್ಪಮೊಯಿಲಿಯವರು ಅದಕ್ಕೆ ಉತ್ತರಿಸುವುದಾಗಿ ಹೇಳಿದ್ದರು. ಈಗ ಆ ಉತ್ತರವನ್ನು ಸರಕಾರದ ಪರವಿಯಿಂದ ಕೊಡುತ್ತೀರಾ?

ಅಧ್ಯಕ್ಷರು.—ಆಯಿತು ಕೊಡುತ್ತಾರೆ.

ಶಾಸನ ರಚನಾ ಕಾರ್ಯಕಲಾಪಗಳು

೧೯೯೦ನೇ ಇಸವಿಯ ಹಿಂದೂ ಉತ್ತರಾಧಿಕಾರ (ಕರ್ನಾಟಕ ತಿದ್ದುಪಡಿ) ವಿಧೇಯಕ.

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಬಿ.ಶಿವಣ್ಣ (ಕಾನೂನು ಮತ್ತು ಸಮಾಜ ಕಲ್ಯಾಣ ಮಂತ್ರಿಯವರು).— ಮಾನ್ಯ ಅಧ್ಯಕ್ಷರೆ, ನಾನು ಈಗ ಪರ್ಯಾಲೋಚನಾ ಪ್ರಸ್ತಾಪವನ್ನು ಮಂಡಿಸುತ್ತೇನೆ ಪ್ರಸ್ತಾವ ಹೀಗಿದೆ "1990ನೇ ಇಸವಿಯ ಹಿಂದೂ ಉತ್ತರಾಧಿಕಾರ (ಕರ್ನಾಟಕ ತಿದ್ದುಪಡಿ)ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೇಳಿಕೊಳ್ಳುತ್ತೇನೆ."

ಪ್ರಸ್ತಾವವನ್ನು ಮಂಡಿಸಲಾಯಿತು.

† ಶ್ರೀ ಆರ್.ವಿ. ದೇಶಪಾಂಡೆ (ಹಳಿಯಾಳ).—ಮಾನ್ಯ ಅಧ್ಯಕ್ಷರೆ, ಈ ಒಂದು ಅಮೆಂಡ್‌ಮೆಂಟ್ ಬಿಲ್ಲನ್ನು ಮಾನ್ಯ ಕಾನೂನು ಸಚಿವರು ಮಂಡಿಸಿದ್ದಾರೆ. ಅದನ್ನು ನಾನು ಸ್ವಾಗತಿಸುತ್ತೇನೆ. ಈ ಒಂದು ತಿದ್ದುಪಡಿಯನ್ನು ನಾವು ಸಹ ನಮ್ಮ ಸರಕಾರ ಇದ್ದಾಗ ತರಬೇಕೆಂದು ಆಲೋಚನೆ ಮಾಡಿ ನಿರ್ಣಯವನ್ನು ಸಹ ತೆಗೆದುಕೊಂಡಿದ್ದೇವೆ. ಇವೊತ್ತು ಸಮಾಜದಲ್ಲಿ ಮಹಿಳೆಯರಿಗೆ ನಿಜವಾದ ಒಂದು ಇಕಾನಮಿಕ್ ಸ್ಟೇಟಸ್ ಕೊಡಬೇಕಾದರೆ ಅದು ಈ ಒಂದು ಮಸೂದೆಯಿಂದ ಸಾಧ್ಯವಾಗಬಹುದು ಎಂದು ನನಗನ್ನಿಸುತ್ತದೆ. ಅದೇ ಪ್ರಕಾರ ನಮ್ಮ ಸಂವಿಧಾನದಲ್ಲಿ ಪ್ರತಿಯೊಬ್ಬರಿಗೂ ಒಂದು ಸಮಾನವಾದ ಹಕ್ಕು ಇರಬೇಕೆಂದು ಹೇಳುತ್ತೇವೆ. ಆದರೆ ಹಿಂದೂ ಉತ್ತರಾಧಿಕಾರ ಆಕ್ಟ್ ೧೯೫೬ರ ಪ್ರಕಾರ ಕೇವಲ ಸೆಕ್ಸ್ ಆಧಾರದ ಮೇಲೆ ಇವೊತ್ತು ನಾವು ಹೆಣ್ಣುಮಕ್ಕಳಿಗೆ ಆಸ್ತಿಯಲ್ಲಿ ಅಧಿಕಾರವನ್ನು ಕೊಡುತ್ತಾ ಇಲ್ಲ. ಆದರಿಂದ ಈ ಮಸೂದೆಯಿಂದ ಸೋಷಿಯಲ್ ಜಸ್ಟೀಸ್ ಆಗಬಹುದು. ಆದರೆ ಈ ಹಿಂದೂ ಉತ್ತರಾಧಿಕಾರ ಮಸೂದೆಯಲ್ಲಿ after Section-6,-6A ಎಂದು ಇನ್‌ಕಾರ್ಪೊರೇಟ್ ಮಾಡಿದ್ದಾರೆ.

"6A. Equal rights to daughter in coparcenary property.--Notwithstanding anything contained in section 6 of this Act.-

(a) in a joint Hindu family governed by Mitakshara law, the daughter of a coparcener shall by birth become a coparcener in her own right in the same manner as the son and have the same rights in the coparcenery property as she should have had if she had been a son, inclusive of the right to claim by survivorship, and shall be subject to the same liabilities and disabilities in respect* there to as the son."

This is according to Section 6A. Further Section 6(d) says:

"Nothing in clause (b) shall apply to a daughter married prior to or to a partition which had been effected before the commencement of Hindu Succession (Karnataka Amendment) Act, 1990."

ಅಂದರೆ ಈ ಮಸೂದೆಗೆ ಯಾವ ದಿನ ಮನ್ನಣೆ ಸಿಗುತ್ತದೆ ಆ ದಿನದಿಂದ ಜಾರಿಗೆ ಬರುತ್ತದೆ ಜಾರಿಗೆ ಬರುವುದಕ್ಕಿಂತ ಮುಂಚೆ partition ಆದರೆ: ಆ ಒಂದು ಹೆಣ್ಣುಮಕ್ಕಳ ಮದುವೆ ಆದರೆ ಆಕೆಗೆ ಆ ಒಂದು ಅಧಿಕಾರ ಸಿಗುವುದಿಲ್ಲ. I respectfully submit to the Hon'ble Speaker that this